**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಸೋಮವಾರಪೇಟೆ.**

**ಸಿ.ಸಿ. ನಂಬರ್ : 266/2019**

ಡಿ.ಡಬ್ಲ್ಯೂ : 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ :02.08.2023

| | | |
|---|---|---|
| ಹೆಸರು | : | ಪ್ರಭಾಕರ್ |
| ತಂದೆಯ ಹೆಸರು | : | ಚಂದ್ರೇಗೌಡ |
| ವಯಸ್ಸು | : | 44 ವರ್ಷ |
| ವೃತ್ತಿ | : | ವ್ಯಾಪಾರ |
| ವಾಸ | : | ಬಾಲ್ಯೂಪೇಟೆ, ಸಕಲೇಶಪುರ |

ಮುಖ್ಯ ವಿಚಾರಣೆ : ಶ್ರೀ. ಎಸ್.ಜೆ.ಹೆಚ್ ರವರಿಂದ - ಆರೋಪಿ ಪರವಾಗಿ:

ಫಿರ್ಯಾದಿಯ ಪರಿಚಯ ನನಗೆ ಇಲ್ಲ. ನನಗೆ ಫಿರ್ಯಾದಿಯಿಂದ ಯಾವುದೇ ನೋಟಿಸು ಬಂದಿರುವುದಿಲ್ಲ. ಫಿರ್ಯಾದಿ ಯಾರು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ವಿಚಾರಿಸಿದಾಗ ಫಿರ್ಯಾದಿಯು ಶನಿವಾರಸಂತೆ ಹೋಬಳಿ ಅಂಬಳಿ ಗ್ರಾಮದವರು ಎಂದು ತಿಳಿಯಿತು. ನಂತರ ವಿಚಾರಿಸಿದಾಗ ಫಿರ್ಯಾದಿಯ ಅಣ್ಣ ಉಮೇಶ್ ಎಂಬುವವರು ಹಾಸನದಲ್ಲಿ ಕಳಿಂಗ ಫೈನಾನ್ಸ್ ಎಂಬ ಫೈನಾನ್ಸ್ ಅನ್ನು ನಡೆಸುತ್ತಿದ್ದರು ಎಂದು ತಿಳಿಯಿತು. ಸದರಿ ಫಿರ್ಯಾದಿ ಮತ್ತು ಉಮೇಶ್ ರವರ ಸೋದರ ಮಾವ ಶಿವಪ್ಪ ರವರು ಸರ್ಕಾರಿ ನೌಕರಿಯಲ್ಲಿ ಇರುತ್ತಾರೆ. ಶಿವಪ್ಪ ರವರು ಬಡ್ಡಿಗೆ ಹಣ ನೀಡುವ ವ್ಯವಹಾರವನ್ನು ಮಾಡುತ್ತಾರೆ. ಆ ಸಂಬಂಧ ನಾನು ಅವರಿಂದ 25 ಲಕ್ಷ ಹಣವನ್ನು 2013 ರಲ್ಲಿ ಸಾಲವಾಗಿ ಪಡೆದಿದ್ದೆ. ಸದರಿ ಸಾಲದ ಭದ್ರತೆಗೆ ಶಿವಪ್ಪ ರವರಿಗೆ ನನ್ನ ಹಾಸನದಲ್ಲಿರುವ ಮನೆಯ ಬಗ್ಗೆ ನೊಂದಾಯಿತ ಕ್ರಯ ಕರಾರು ಪತ್ರವನ್ನು ಬರೆದು ಕೊಟ್ಟಿರುತ್ತೇನೆ. ಅದರ ಜೊತೆಗೆ ನಾನು 20 ಖಾಲಿ ಸಹಿ

ಮಾಡಿದ ಎಸ್.ಬಿ.ಐ ಮತ್ತು ಕರ್ನಾಟಕ ಬ್ಯಾಂಕ್ ನ ಚೆಕ್ಕುಗಳನ್ನು ಮತ್ತು ನನ್ನ ಮತ್ತು ನನ್ನ ಪತ್ನಿಯ ಛಾಪಾ ಕಾಗದಗಳನ್ನು ಶಿವಪ್ಪ ನವರಿಗೆ ಕೊಟ್ಟಿರುತ್ತೇನೆ. ನಾನು ಶಿವಪ್ಪ ರವರ ಪರವಾಗಿ ಕ್ರಯ ಕರಾರು ಪತ್ರ ಬರೆದು ಕೊಟ್ಟಾಗ ಸದರಿ ಪತ್ರಕ್ಕೆ ಫಿರ್ಯಾದಿಯ ಅಣ್ಣ ಉರ್ಮೇಶ್ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ.

ನಾನು 2015 ರಲ್ಲಿ ಶಿವಪ್ಪ ರವರಿಂದ ಪಡೆದುಕೊಂಡ ಎಲ್ಲಾ ಹಣವನ್ನು ಮರು ಪಾವತಿ ಮಾಡಿದೆನು. ಆಗ ಶಿವಪ್ಪ ರವರು ಕೆಲವೊಂದು ಚೆಕ್ಕುಗಳು ನನ್ನ ಬಳಿ ಉಳಿದಿದ್ದು ಆ ನಂತರ ಕೊಡುತ್ತೇನೆ ಎಂದು ಹೇಳಿದರು. ಅದರಂತೆ ನಾನು ಬರೆದು ಕೊಟ್ಟ ಕ್ರಯ ಕರಾರು ಪತ್ರವನ್ನು ರದ್ದತಿ ಮಾಡುವ ಸಂಬಂಧ ಉಪನೊಂದಣಾಧಿಕಾರಿಗಳ ಕಚೇರಿಗೆ ರದ್ಧತಿ ಪತ್ರ ಮಾಡಲು ಹೋಗಿದ್ದೇನು. ಆಗ ನನಗೆ ಗೊತ್ತಿಲ್ಲದಂತೆ ಶಿವಪ್ಪ ರವರ ಪರವಾಗಿ ಬರೆದುಕೊಟ್ಟ ಕರಾರು ಪತ್ರವನ್ನು ರದ್ದುಗೋಳಿಸಿ ಅದೇ ಸಮಯಕ್ಕೆ ಫಿರ್ಯಾದಿಯ ಅಣ್ಣ ಉಮೇಶ್ ರವರ ಹೆಸರಿಗೆ ಇನ್ನೊಂದು ಕ್ರಯ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತಾರೆ. ಅದೇ ರೀತಿ ನನ್ನಿಂದ ಪಡೆದುಕೊಂಡು ನನ್ನ ಪತ್ನಿಯ ಸಹಿ ಇರುವ ಖಾಲಿ ಛಾಪಾ ಕಾಗದಗಳನ್ನು ಬರೆಸಿಕೊಂಡು ಉಮೇಶ್ ರವರ ಪತ್ನಿ ಶಿಲ್ಪ ರವರ ಹೆಸರಿನಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿರುವ ಬೆಂಗಳೂರಿನ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆ. ಉಮೇಶ್ ರವರು ಮಾಡಿಕೊಂಡ ಕ್ರಯ ಕರಾರು ಪತ್ರದ ಬಗ್ಗೆ ಮತ್ತು ಅವರ ಪತ್ನಿ ನನ್ನ ಪತ್ನಿ ಹೆಸರಿನಲ್ಲಿ ಮಾಡಿಕೊಂಡಿರುವ ಕ್ರಯ ಕರಾರು ಪತ್ರದ ಬಗ್ಗೆ ಮೂಲ ದಾವೆಗಳು ಚಾಲ್ತಿಯಲ್ಲಿರುತ್ತವೆ. ಫಿರ್ಯಾದಿ ಜೊತೆ ನಾನು ಯಾವುದೇ ರೀತಿಯ ವ್ಯವಹಾರ ಮಾಡಿರುವುದಿಲ್ಲ. ನನಗೆ ಫಿರ್ಯಾದಿಯ ಪರಿಚಯ ಇರುವುದಿಲ್ಲ. ಫಿರ್ಯಾದಿಯ ಬಗ್ಗೆ ವಿಚಾರ ಮಾಡಿದಾಗ ಅವರು ಬಿಪಿಎಲ್ ಪಡಿತರ ಚೀಟಿ ಹೊಂದಿದ್ದು ಅವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ ಮತ್ತು ಅವರು ಎಸ್ಟೇಟ್ ಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ ಎಂದು ತಿಳಿಯಿತು. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕಾಗಿ ಪ್ರಾರ್ಥನೆ.

ಫಿರ್ಯಾದಿಯ ಅಣ್ಣ ನನ್ನ ಮೇಲೆ ಸಲ್ಲಿಸಿರುವ ಅಸಲು ದಾವಾ ನಂ. 99/2018 ರ ಆದೇಶ ಪುಟ, ತಿದ್ದುಪಡಿ ವಾದ ಪತ್ರ, ನಾನು ಸಲ್ಲಿಸಿದ ಪ್ರತಿವಾದ

ಪತ್ರ, ಸ್ಟೇಟ್ ಬ್ಯಾಂಕ್ ಇಂಡಿಯಾ ರವರು ಸಲ್ಲಿಸಿದ ತಕರಾರು ಪತ್ರ ಮತ್ತು ಪ್ರತಿವಾದ ಪತ್ರ, ವಿವಾದಾಂಶಗಳ ದೃಡೀಕೃತ ನಕಲುಗಳನ್ನು ನಿಡಿ 1 ರಿಂದ 5 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ರಿಂದ 4, 6, 8, 9 ರ ದೃಡೀಕೃತ ನಕಲನ್ನು ನಿಡಿ 6 ರಿಂದ 12 ಎಂದು ಗುರುತಿಸಲಾಯಿತು. ನಿಡಿ 9 ಕ್ಕೆ ನಾವು ಸಲ್ಲಿಸಿದ ತಕರಾರಿನ 2 ದೃಡೀಕೃತ ಪ್ರತಿಯನ್ನು ನಿಡಿ 13 ಮತು 14 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ

ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.